

ಈ ಕಿಲಾಡಿ ಗಿರಾಕಿಗಳಿಂದ ತಾವೆಲ್ಲಿ ಮೋಸ ಹೋಗಿಬಿಡುವೆವೋ ಅನ್ನುವ ಅದಮ್ಯ ಗಾಬರಿ! ಅತ್ತಿಂದಿತ್ತ ಇತ್ತಿಂದತ್ತ ಸರಸರನೆ ಸುಳಿದಾಡುತ್ತ ಪರದಾಡುತ್ತಿದ್ದರು.

ಇನ್ನು ಕೆಲವು ಹೆಂಗಸರು ಬುಟ್ಟಿಗಳನ್ನು ಕಾಲಬಳಿ ಇಳಿಸಿ ಕೋಳಿ ಜಾತಗಳನ್ನೆಲ್ಲ ನೆಲದ ಮೇಲೆ ಬಿಟ್ಟಿದ್ದರು. ಅವೆಲ್ಲವುಗಳ ಕಾಲುಗಳನ್ನು ಒಂದೇ ಹುರಿಯಿಂದ ಸೇರಿಸಿ ಕಟ್ಟಿಹಾಕಲಾಗಿತ್ತು. ಅವುಗಳ ತಲೆಮೇಲಿನ ಕಡುಕೆಂಪು ಜುಟ್ಟುಗಳು ಆಗಿಂದಾಗ ಮೆಲ್ಲಮೆಲ್ಲಗೆ ಮಿಸುಕಾಡುತ್ತಿದ್ದರೆ ಆ ಪುಟ್ಟ ಮಣಿಕಣ್ಣುಗಳು ಕಾಣದೊಂದು ತಲ್ಲಣದಿಂದ ಪಾಪ ಭಯಭೀತವಾಗಿದ್ದವು. ಅವುಗಳನ್ನು ಮಾರಲು ಬಂದಿದ್ದ ಮಹಿಳೆಯರಿಗೂ ತಲ್ಲಣವೇ! ಗಿರಾಕಿಗಳು ಕೇಳುವ ಬೆಲೆಗೂ ಮಾರುವ ಹೆಂಗಸರು ಬಯಸುವ ಬೆಲೆಗೂ ಅಜಗಜಾಂತರ! ಸಾಕಷ್ಟು ಗೊಂದಲ ಅನುಭವಿಸಿದ ಮೇಲೆ ಕಡೆಗೂ ಅವರು ಗಿರಾಕಿಗಳು ಕೇಳಿದ ಬೆಲೆಗೇ ಕೊಟ್ಟುಬಿಡಲು ತೀರ್ಮಾನಿಸಿ, ಆ ವೇಳೆಗಾಗಲೇ ಅಲ್ಲಿಂದ ಬೇರೆ ಕಡೆಗೆ ಜಾರಿ ಬಿಡಲು ಹವಣಿಸುತ್ತಿದ್ದ ಗಿರಾಕಿಗಳನ್ನು ಆತಂಕದಿಂದ ಕೂಗಿ ಕೂಗಿ ಕರೆಯುತ್ತಿದರು–

“ಆಯ್ತು ಸ್ವಾಮಿ ಆಯ್ತು! ಬನ್ನಿ ಬನ್ನಿ... ನೀವು ಕೇಳಿದ ಬೆಲೆಗೆ ಕೊಟ್ಟು ಬಿಡ್ತೀನಿ... ನಾನೇನು ನಿಮಗೆ ಆಗಲ್ಲ ಅಂದೆನೇ? ಸಿಟ್ಟು ಮಾಡಬೇಡಿ, ಬನ್ನಿ ಸ್ವಾಮಿ ತಗೊಳ್ಳಿ ಮತ್ತೆ...”

ಕ್ರಮೇಣ ನಿಧನಿಧಾನವಾಗಿ ಸಂತೆಯ ಭರಾಟೆಗಳು ಮುಗಿಯತೊಡಗಿ ಗದ್ದಲ ಕಡಿಮೆಯಾಗತೊಡಗಿತು. ಜನರ ಗುಂಪು ಕೂಡ ಕರಗತೊಡಗಿ ಜನಸಂದಣಿ ಅಲ್ಲಿ ವಿರಳವಾಗುತ್ತಾ ಹೋಯಿತು. ಅತ್ತ ಮಧ್ಯಾಹ್ನದ ಪ್ರಾರ್ಥನಾ ಗಂಟೆಯೂ ಗಟ್ಟಿಯಾಗಿ ಮೊಳಗಿ ಹೊತ್ತಾಯಿತೆಂದು ಅಂಗಡಿಗಳ ವ್ಯಾಪಾರಿಗಳು ಧಾವಂತದಿಂದ ಹಿಂತಿರುಗತೊಡಗಿದರು.

ನಗರ ಮಧ್ಯದ ಆ ವಿಶಾಲವಾದ ಹೋಟೆಲಿನಲ್ಲಿ ಜನ ಕಿಕ್ಕಿರಿದು ತುಂಬಿ ಬಗೆಬಗೆಯ ತಿನಿಸುಗಳನ್ನು ಹೊಟ್ಟೆಗಿಳಿಸುವುದರಲ್ಲಿ ಮಗ್ನರಾಗಿದ್ದರು. ಹೊರಗಿನ ದೊಡ್ಡ ಅಂಗಳದಲ್ಲಿ ಚಕ್ಕಡಿಗಳು, ಕುದುರೆ ಗಾಡಿಗಳು, ಸಾಮಾನು ಬಂಡಿಗಳು, ಕೊಳೆಯಿಂದಾಗಿ ಹಳದಿ ಬಣ್ಣಕ್ಕೆ ತಿರುಗಿ ಬಿಟ್ಟಿದ್ದ ಕಸದ ಗಾಡಿಗಳು ಮುಂತಾದವು ಅಸ್ತವ್ಯಸ್ತವಾಗಿ ಪೇರಿಸಿಕೊಂಡಿದ್ದವು.

ಒಳಗೆ ಉಣ್ಣುತ್ತಾ ಕೂತವರ ಹಿಂಭಾಗದಲ್ಲಿ ಇದ್ದ ಬೆಂಕಿಗೂಡಲ್ಲಿ ಪ್ರಜ್ವಲವಾಗಿ ಉರಿಯುತ್ತಿದ್ದ ಬೆಂಕಿಯ ಜ್ವಾಲೆ ಅವರ ಬೆನ್ನಮೇಲೆ ಉಲ್ಲಾಸಕರವಾದೊಂದು ಬೆಳಕನ್ನು ಪ್ರತಿಫಲಿಸಿತ್ತು. ಪಕ್ಕದಲ್ಲೇ ಮೂರು ಸುಡುಸಲಾಕೆಗಳು ತಿರುತಿರುಗುತ್ತಾ ಕೋಳಿ, ಪಾರಿವಾಳ ಮತ್ತು ಆಡಿನ ಕಾಲುಗಳನ್ನು ಹದವಾಗಿ ಬೇಯಿಸುತ್ತಿದ್ದವು.

ಮತ್ತೊಂದೆಡೆಯಿಂದ ಹುರಿದ ಮಾಂಸ ಮತ್ತದರ ಮಸಾಲೆಯ ಘಮಲು ತೇಲಿತೇಲಿ ಬಂದು ಜನರ ಬಾಯಲ್ಲಿ ನೀರೂರಿಸುತ್ತಾ ಹಸಿವನ್ನು ಕೆರಳಿಸುತ್ತಿತ್ತು.

ಆ ಹೋಟೆಲಿನಲ್ಲಿ ಊರಿನ ಪ್ರತಿಷ್ಠಿತ ವರ್ಗಕ್ಕೆ ಸೇರಿದ ಕುದುರೆ ದಲ್ಲಾಳಿಗಳು ಅಂಗಡಿ ಮಾಲೀಕರು ಮುಂತಾದವರಲ್ಲದೆ ಹಣ ಹೇರಳವಾಗಿರುವ ಹಲವಾರು ಪುಂಡ ಪೋಕರಿಗಳೂ ಹುಮ್ಮಸ್ಸಿನಿಂದ ಜಮಾಯಿಸಿ ಹರಟುತ್ತಾ ಕವಳ ಕತ್ತರಿಸುತ್ತಾ ಕೂತಿದ್ದರು.

ಬಗೆಬಗೆಯ ಖಾದ್ಯಗಳು ಮತ್ತು ಸೇಬು ರಸದ ಬಟ್ಟಲುಗಳು ಮೇಜಿನ ಮೇಲೆ ಬರಬರುತ್ತಿದ್ದಂತೆಯೇ ಅಲ್ಲಿಂದಲ್ಲೇ ಖಾಲಿಯಾಗಿ ಬಿಡುತ್ತಿದ್ದವು. ತಿನ್ನುತ್ತಾ ಕುಡಿಯುತ್ತಾ ಪ್ರತಿಯೊಬ್ಬರೂ ತಮ್ಮ ತಮ್ಮ ವ್ಯಾಪಾರ ವಹಿವಾಟುಗಳ ಬಗ್ಗೆ ಕೃಷಿ ವಿಷಯಗಳ ಬಗ್ಗೆ ಉತ್ಸಾಹದಿಂದ ಮಾತನಾಡುತ್ತಿದ್ದರು. ಈ ಹೊತ್ತಿನ ಹವಾಮಾನ ಹಸಿರು ತರಕಾರಿಗಳಿಗೆ ಅನುಕೂಲಕರವೇ ಹೊರತು, ಗೋಧಿ ಬೆಳೆಗೆ ಸೂಕ್ತವಲ್ಲ ಎಂಬುದು ಅವರೆಲ್ಲರ ಒಮ್ಮತ. ಹೀಗೆ ಅವರೆಲ್ಲರ ತಿನ್ನಾಟ–ಮಾತಾಟಗಳು ಕಾವೇರಿ ರಂಗು ಪಡೆದುಕೊಳ್ಳುತ್ತಿರುವಾಗಲೇ ಇದ್ದಕ್ಕಿದ್ದಂತೆ ಹೊರಗಿನ ಅಂಗಳದಿಂದ ಗಟ್ಟಿಯಾಗಿ ತಮಟೆಯ